**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.**

ಸಿಸಿ ನಂ. 65/2022

| ಫಿರ್ಯಾದಿ | | ಆರೋಪಿ |
|---|---|---|
| ಚೇತನ ಗೋವಿಂದ ನಾಯಕ , ಸಾಃ ಹಿತ್ಲಮಕ್ಕಿ , ಕುಮಟಾ. | ವಿರುದ್ಧ | ಗುರು ರಮೇಶ ಖಾರ್ವಿ |

ಆರೋಪಿಃ

ಗುರು ರಮೇಶ ಖಾರ್ವಿ,
40 ವರ್ಷ, ಉ: ಮೀನುಗಾರಿಕೆ, ಸಾಃ ಮಧ್ಯಕಾರ್ವಿವಾಡಾ,
ಬೆಳಂಬಾರ , ತಾಃ ಅಂಕೋಲಾ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ದಿಃ 10-09-2020 ರಂದು ನೀವು ನಿಮ್ಮ ವ್ಯವಹಾರಕ್ಕಾಗಿ ಫಿರ್ಯಾದುದಾರರಿಂದ 3,00,000/-ರೂಪಾಯಿ ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು 2 ರಿಂದ 3 ತಿಂಗಳುಗಳ ಒಳಗಾಗಿ ಹಿಂದಿರುಗಿಸುತ್ತೇನೆ ಎಂದು ಹೇಳಿದ್ದು , ಆದರೆ ನೀವು 2 ರಿಂದ 3 ತಿಂಗಳು ಕಳೆದರೂ ಸಹ ಸದರಿ ಹಣವನ್ನು ಮರುಪಾವತಿ ಮಾಡದೇ , ಸದರಿ ಸಾಲದ ತೀರುವಳಿಯ ಸಲುವಾಗಿ ನೀವು ದಿಃ 29-06-2021 ರಂದು ಫಿರ್ಯಾದುದಾರರಿಗೆ ಅಂಕೋಲಾ ಶಾಖೆಯ ಸಿಂಡಿಕೇಟ್ ಬ್ಯಾಂಕ್ (ಈಗಿನ ಕೆನರಾ ಬ್ಯಾಂಕ್ )ನ ಚೆಕ್ ನಂ. 279618 ನ್ನು 3,00,000/- ರೂಪಾಯಿಗೆ ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಕುಮಟಾ ಶಾಖೆಯ ಆಯ್ ಸಿ ಆಯ್ ಸಿ ಆಯ್ ಬ್ಯಾಂಕಿಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು , ಈ ಕುರಿತು ನಿಮಗೆ ದಿಃ 17-07-2021 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸನ್ನು ನೀವು ಸ್ವೀಕರಿಸದೆ ವಾಪಾಸು ಬಂದಿದ್ದು , ಸದರಿ ನೋಟಿಸು ನಿಮಗೆ ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1 ನಿಮ್ಮ ಮೇಲೆ** ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 17-04-2023.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ.